International Journal of Kannada Research 2018; 4(2): 77-80

International Journal of Kannada Research
www.kannadajournal.com

**ISSN: 2454–5813**
IJKR 2018; 4(2): 77-80
© 2018 IJKR
www.kannadajournal.com
Received: 17-02-2018
Accepted: 18-03-2018

**ವಿಜಯಕುಮಾರ ಬಿ. ಬೀಳಗಿ**
Research Scholar Department of Kannada Gulabarga University Kalaburagi, Karnataka, India

**Correspondence**
**ವಿಜಯಕುಮಾರ ಬಿ. ಬೀಳಗಿ**
Research Scholar Department of Kannada Gulabarga University Kalaburagi, Karnataka, India

# ದಲಿತ ಸಾಹಿತ್ಯದ ಆರಂಭ ಕಾಲ

**ವಿಜಯಕುಮಾರ ಬಿ. ಬೀಳಗಿ**

೭೦ರ ದಶಕ ಕನ್ನಡ ಸಾಹಿತ್ಯದಲ್ಲಿ ಹೊಸದೊಂದು ಅಲೆಯನ್ನು ಎಬ್ಬಿಸಿತು. ಅದು ದಲಿತ ಮತ್ತು ಬಂಡಾಯ ಸಾಹಿತ್ಯದಿಂದಾಗಿ, ಎಂದರೆ ತಪ್ಪಾಗಲಾರದು. ಸಾಹಿತ್ಯ ನಿರ್ಮಾಣದಲ್ಲಿ ಆಸ್ತಿ ಅಂತಸ್ತು ಬಹಳ ಮುಖ್ಯವಲ್ಲದಿದ್ದರೂ ವರ್ಗ ಮತ್ತು ವರ್ಣನೀತಿಗಳು ಬಹಳ ಮುಖ್ಯವಾಗಿದ್ದವು. ಆದರೆ ಈ ಸಂದರ್ಭದಲ್ಲಿ ಅವೆಲ್ಲವುಗಳನ್ನು ದಿಕ್ಕರಿಸಿ ದಲಿತರು–ಧಮನೀತರು ಕಾವ್ಯವನ್ನು ಬರೆದು ತಮ್ಮ ಅಂತಃರಂಗದ ನೋವು–ನಲಿವು, ತುಡಿತ–ಮಿಡಿತ ಹತಾಶೆ ಮತ್ತು ಆಶಾ ಭಾವನೆಯ ಹೊಸ ಜಗತ್ತಿನೊಂದಿಗೆ ಅಂಟಿಕೊಳ್ಳುವ ಮತ್ತು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ತವಕದಲ್ಲೇ ಈ ದಲಿತ ಮತ್ತು ಬಂಡಾಯ ಸಾಹಿತ್ಯ ಹುಟ್ಟಿಕೊಂಡಿದೆ.

ದಲಿತ ಎಂದರೆ ಯಾರು? ಅದೊಂದು ವರ್ಗವೇ? ಜಾತಿಯೇ? ಜನಾಂಗವೇ? ಸಾಹಿತ್ಯವೆ? ಬುಡಕಟ್ಟುವೆ? ಕುಲವೆ? ಬಣವೆ? ಎಂದು ಮುಂತಾದ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ. 'ದಲಿತ' ಪದಕ್ಕೆ ಸಮನಾರ್ಥ ಮತ್ತು ವಿಶೇಷಾರ್ಥಗಳುಂಟು. ಪ್ರತಿಯೊಂದು ಶಬ್ದಕ್ಕಿರುವಂತೆ ದಲಿತ, ದಳಿತ, ದಳ ಎಂದು ಹಲವು ಪದಗಳು ಬಳಕೆಯಲ್ಲಿವೆ. 'ದಲಿತ' ಈ ಪದ ಸಂಸ್ಕೃತ ಭಾಷೆಯ ಪದವಾಗಿದೆ. ಅದರರ್ಥ ತುಳಿಯಲ್ಪಟ್ಟ ಅಥವಾ ಹತ್ತಿಕ್ಕಲ್ಪಟ್ಟ ಎಂಬ ಪದಕ್ರಾಂತವಾಗಿದೆ".[೧] ಆದರೆ ಇಂದು ಕನ್ನಡ ಸಾಹಿತ್ಯ ವಲಯದಲ್ಲಿ ತನ್ನ ಅಸ್ತಿತ್ವದ ಅರಿವಿನಿಂದ ಗಟ್ಟಿಯಾಗಿ ನಿಂತಿದೆ.

"ಖಡ್ಗವಾಗಲಿ ಕಾವ್ಯ ಜನತೆಯ ನೋವಿಗೆ ಮಿಡಿಯುವ ಪ್ರಾಣಮಿತ್ರ, ಎಂಬ ಸಂದೇಶದೊಂದಿಗೆ ಜನ್ಮ ತಳೆದ ಈ ದಲಿತ–ಬಂಡಾಯ ಸಾಹಿತ್ಯ ವಿಚಾರಧಾರೆಗಳಿಂದ ಬೆಳೆದರು ೧೯೭೯ರ ಮಾರ್ಚ ೧೦–೧೧ರಂದು ಬೆಂಗಳೂರಿನಲ್ಲಿ ಜರುಗಿದ ದಲಿತ–ಬಂಡಾಯ ಸಾಹಿತ್ಯ ಸಮ್ಮೇಳನದವರೆಗೆ ಒಂದೇ ತಲೆಯಲ್ಲಿದ್ದ ಗಂಡಭೇರುಂಡ ಪಕ್ಷಿ ಅನಂತರ ಎರಡು ತಲೆಗಳಾಗಿ ಟಿಸಿಲೊಡೆದು ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ ಎಂದು ಕರೆಯಲ್ಪಟ್ಟಿತ್ತು. ದಲಿತ–ಬಂಡಾಯ ಸಂಬಂಧವನ್ನು ನೋಡಿದರೆ ಅವು ಹುಟ್ಟಿಕೊಂಡ ನೆಲೆಗಳು ಬೇರಯಾಗಿದ್ದರೂ, ಅವು ತಲುಪುವ ಗುರಿಯಲ್ಲಿ ಮಾತ್ರ ವ್ಯತ್ಯಾಸವಿಲ್ಲ. ಪ್ರತಿಭಟನೆ ಎಂಬುದು ಎರಡರಲ್ಲೂ ಕಾಣುವ ಸಾಮಾನ್ಯ ಅಂಶವಾಗಿದೆ. ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಬೇಕೆಂಬುದು ಎರಡೂ, ಪರಂಪರೆಗಳ ವಾದವಾಗಿದೆ. ಈ ವಾದಕ್ಕೆ ಬುದ್ಧ, ಬಸವ, ಗಾಂಧೀ, ಲೋಹಿಯಾ, ಪರಿಯಾರ್, ಫುಲೆ, ಮಾರ್ಕ್ಸ್ ಮತ್ತು ಅಂಬೇಡ್ಕರ್ ಮುಂತಾದವರ ಪ್ರಭಾವವು ಆಗಿದೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯ ಎಂದ ಕೂಡಲೇ ಬಂಡಾಯದ ನೆನಪು, ಬಂಡಾಯ ಸಾಹಿತ್ಯ ಎಂದ ಕೂಡಲೇ ದಲಿತ ಸಾಹಿತ್ಯದ ನೆನಪು ಒಮ್ಮೆಲೆ ಮೂಡುತ್ತದೆ."[೨]

ದಲಿತ ಸಾಹಿತ್ಯದ ಪಕ್ಷಿನೋಟದೊಂದಿಗೆ ಬಂಡಾಯ ಸಾಹಿತ್ಯದ ಕಡೆಗೆ ಹೊರಳುತ್ತೇನೆ. "ಕರ್ನಾಟಕದಲ್ಲಿನ ದಲಿತ ಸಾಹಿತ್ಯಕ್ಕೆ ಯುರೋಪಿನ ಯಹೂದಿ ಸಾಹಿತ್ಯ, ಆಫ್ರಿಕಾದ ಕಪ್ಪು ಸಾಹಿತ್ಯ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಸಾಹಿತ್ಯ, ಆಂದ್ರದ ದಿಗಂಬರ ಸಾಹಿತ್ಯ, ತಮಿಳಿನ ಸಂಗಂ ಸಾಹಿತ್ಯ ಹೀಗೆ ಅನೇಕ ಸಾಹಿತ್ಯಗಳ ಪ್ರೇರಣೆ ಮತ್ತು ಪ್ರಭಾವವನ್ನು ಪಡೆದುಕೊಂಡು ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಜನ್ಮತಳೆದಿದೆ"[೩] ಎಂಬುದು ಸತ್ಯ ಸಂಗತಿಯಾಗಿದೆ.

ಸ್ವಾತಂತ್ರ್ಯ ಪೂರ್ವಕ್ಕಿಂತಲೂ ಸ್ವಾತಂತ್ರ್ಯ ನಂತರದಲ್ಲಿ ದೀನ–ದಲಿತ, ದುರ್ಬಲ ಮತ್ತು ಧಮನೀತರ ಬದುಕು ಹಸನಗೊಳ್ಳತೊಡಗಿತ್ತು. ಅದು ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರು ಬರೆದ ಸಂವಿಧಾನದ ಮೂಲಕವಾಗಿದೆ. ದಲಿತ ಬಂಡಾಯ ಸಾಹಿತ್ಯದ ಉಗಮಕ್ಕೆ ಬಾಬಾ ಸಾಹೇಬ ಅಂಬೇಡ್ಕರ್‌ರೆ ಮೂಲ ಪ್ರೇರಣೆ ಮತ್ತು ಸ್ಫೂರ್ತಿಯಾಗಿದ್ದಾರೆ. ಈ ಹಿಂದೆ ದಲಿತರ ದನಿಯಾಗಿ ಕಾವ್ಯ, ಕತೆ, ಕಾದಂಬರಿಗಳು ಮತ್ತು ವಚನಗಳು, ತತ್ವಪದ ಹಾಗೂ ಕೀರ್ತನೆಗಳಲ್ಲಿ ದಲಿತರ ಕುರಿತು ಚಿತ್ರಣ ಮತ್ತು ಚಿಂತನಾ ಲಹರಿಗಳು ಕಾಣಿಸಿಕೊಂಡಿವೆ.

ಆದರೆ ೭೦ರ ದಶಕದಲ್ಲಿ ಒಂದು ಭದ್ರವಾದ ವೇದಿಕೆ ಸಿಕ್ಕಿದ್ದು, ಅದು ದೇವನೂರ ಮಹಾದೇವ ಹಾಗೂ ದಲಿತ ಕವಿ ಸಿದ್ಧಲಿಂಗಯ್ಯನವರ ಕಾವ್ಯದಿಂದಾಗಿ. "ಶೂದ್ರರಿಂದ ಕೂಡಿದ್ದ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟವು ಅಸ್ಪೃಶ್ಯರನ್ನು ಅತಿಶೂದ್ರರೆಂದು ಕರೆಯಿತು. ಈ ಒಕ್ಕೂಟವು ಬ್ರಾಹ್ಮಣೇತರ ಚಳವಳಿಯಾಗಿ ೧೯೭೩ರಲ್ಲಿ ಅಸ್ತಿತ್ವಕ್ಕೆ ಬಂದಿತು. ಆದರೆ ೧೯೧೮ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಮೊದಲು ಬ್ರಾಹ್ಮಣೇತರ ಚಳವಳಿಯ ಸಂದರ್ಭದಲ್ಲಿ ಅಸ್ಪೃಶ್ಯರು ತಮ್ಮನ್ನು ಆದಿ ಕರ್ನಾಟಕ ಆದಿ ದ್ರಾವಿಡ ಎಂದು ಕರೆದುಕೊಂಡವು. ೧೯೪೩ರಲ್ಲಿ ಪ್ರಾಬಲ್ಯ ಪಡೆದ 'ಪ್ರಗತಿಶೀಲ ಚಳವಳಿ, ೧೯೭೫ರಲ್ಲಿ 'ಪ್ರಗತಿಪಂಥ' ಎಂಬ ಹೆಸರಿನಿಂದ ಪುಸ್ತಕದ ನಾಮಕರಣಗೊಂಡಿತ್ತು. ಈ ಸಂದರ್ಭದಲ್ಲಿ 'ದಲಿತ' ಎಂಬ ಪದ ಮೊದಲನೆ ಬಾರಿಗೆ ಬಳಕೆಗೆ ಬಂತು. 'ಪ್ರಗತಿಪಂಥ ಮತ್ತು ದಲಿತ ಪಂಥಗಳು ಒಗ್ಗೂಡಿ ನಡೆದುಕೊಂಡು ಬಂದಂತಹ ಸಂದರ್ಭವದು. ಇನ್ನೂ ಬಂಡಾಯದ ಸಂದರ್ಭಗಳಲ್ಲಿ ಶೋಷಣೆಗೆ ಈಡಾದವರೆಲ್ಲ ದಲಿತರು ಎಂದು ವ್ಯಾಖ್ಯಾನಿಸಿದಾಗ, ಅಸ್ಪೃಶ್ಯರು ಸ್ವತಂತ್ರವಾಗಿ ಗುರುತಿಸಲು 'ತರದಲಿತ' ಎಂಬ ವ್ಯಾಖ್ಯಾನವನ್ನು ಚಾಲ್ತಿಗೆ ತಂದರು. ಇಲ್ಲಿ 'ದಲ' ಎನ್ನುವುದು ಸಂಸ್ಕೃತ ಪದದಿಂದ ಬಂದಿದೆ. ಅದರ ಅರ್ಥ ತುಂಡು, ಸೈನ್ಯ, ಚೂರು, ಭಾಗ ಎನ್ನುವ ಅರ್ಥಗಳಿವೆ. ಸೈನ್ಯದ ಹರಿತವಾದ 'ಶಸ್ತ್ರ' ಎನ್ನುವ ಅರ್ಥ ಸಮಂಜಸವೆಂದು ಕೆಲವರು ವಾದ ಮಂಡಿಸಿದ್ದಾರೆ. ಇನ್ನೂ ಕೆಲವರು ದಲಿತ ಎಂದರೆ 'ದಮನಕ್ಕೆ' ಅಥವಾ 'ತುಳಿತಕ್ಕೆ' ಒಳಗಾದವರು ಎಂದಿದ್ದಾರೆ. ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತವಾಸಿಗಳು, ದಾಸ್ಯ, ದಾಸ, ಆದಿಜನಾಂಗ, ತಿರುಕುತ್ತರ್, ಪಂಚಮರು, ಬಹಿಷ್ಕೃತರು, ಹೊಲೆಯಾ, ಮಾದಿಗ, ಮಹಾರ, ಮಾಂಗ, ಆದಿ ಕರ್ನಾಟಕ, ಆದಿ ದ್ರಾವಿಡ, ಅನುಸೂಚಿತ ಜಾತಿಯಾದ ಪರಿಶಿಷ್ಟ ಜಾತಿ, ಹರಿಜನ ಎಂಬ ಇತ್ಯಾದಿ ಹೆಸರಿನಿಂದ ದೇಶದಾದ್ಯಂತ ಇಂದು ಸೂಚಿತಗೊಂಡಿದೆ."[೪]

"ದಲಿತ ಸಾಹಿತ್ಯದ ಮೊದಲ ಹೆಜ್ಜೆಗಳನ್ನು ೧೯೬೦ರಿಂದಲೇ ಗುರುತಿಸುವ ಪ್ರಯತ್ನವನ್ನು ನಮ್ಮ ವಿಮರ್ಶಕರು ಮಾಡಿದ್ದಾರೆ. ಮ.ನ.ಜವರಯ್ಯನವರು, ಜಿ.ವೆಂಕಟಯ್ಯನವರೆ ದಲಿತ ಸಾಹಿತ್ಯದ ಮೊದಲ ಲೇಖಕರೆನ್ನುತ್ತಾರೆ. ಆದರೆ ದಲಿತ ಸಾಹಿತ್ಯದ ತಾತ್ವಿಕ ನೆಲೆಗಳನ್ನು ತೆಗೆದುಕೊಂಡರೆ ಜಿ.ವೆಂಕಟಯ್ಯನವರು ದಲಿತ ಸಾಹಿತ್ಯದ ಮೊದಲಿಗರಾಗಿ ಕರೆಯಲು ಸಾಧ್ಯವಿಲ್ಲ."[೫] ಏಕೆಂದರೆ ಶಿಕ್ಷಣದಿಂದ ವಂಚಿತರಾಗಿದ್ದರೂ ಕೂಡಾ, ತಮ್ಮದೇಯಾದ ಹಾಡುಗಳ ಮೂಲಕ ಮತ್ತು ಅಲ್ಪ ಸ್ವಲ್ಪ ಬರವಣಿಗೆಗಳ ಮೂಲಕ ದಲಿತರ ನೋವು ಮತ್ತು ತಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಾನಮಾನಗಳ ಕುರಿತಾದ ವಿಶ್ಲೇಷಣೆ ಹಳ್ಳಿಗಳಲ್ಲಿ ಕಂಡು ಬಂದಿದ್ದು, ನಾವು ಇಲ್ಲಿ ಸ್ಮರಿಸಬಹುದಾಗಿದೆ. ಲಿಪಿಮೂಲಕ ಸಾಹಿತ್ಯವನ್ನು ಚಿತ್ರಿಸಿದ್ದನ್ನು ನಾವು ಸುನೀಲಕುಮಾರ ಪಿ.ಕಾಂಬಳೆ, (ಗು.ವಿ.ಗು–೨೦೧೩) ಅವರು ಮಂಡಿಸಿದ 'ಮೊದಲ ತಲೆಮಾರಿನ ದಲಿತ ಲೇಖಕರು' ಎನ್ನುವ ಸಂಶೋಧನಾ ಮಹಾಪ್ರಬಂಧದಿಂದ ಹಲವರನ್ನು ಗುರ್ತಿಸಿದ್ದಾರೆ ಮತ್ತು ಒಂದು ಅಧ್ಯಯನ ಶಿಸ್ತಿಗೆ ಒಳಪಡಿಸಿದ್ದಾರೆ. ಅವರಲ್ಲಿ 'ದೇವರಾಯ ಇಂಗಳೆ, ಸೋಸ್ಲೇ ಎಸ್. ಸಿದ್ದಪ್ಪ, ಬಿ.ಶ್ಯಾಮಸುಂದರ್, ಡಿ.ಗೋವಿಂದದಾಸ, ಎನ್. ನರಸಿಂಹಯ್ಯ, ಸಿ.ಎಂ. ದೇವೇಂದ್ರ ನಾಯಕ, ಕುಮಾರ ಕಕ್ಕಯ್ಯ ಪೋಳ, ಕಾಶಿನಾಥ ಪಂಚಶೀಲ ಗವಾಯಿಗಳು, ಮಾಣಿಕರಾವ ಜ್ಯೋತಿ, ಜಿ. ವೆಂಕಟಯ್ಯ"[೬] ಹೀಗೆ ಮುಂತಾದವರ ಪಟ್ಟಿಯೊಂದಿಗೆ ಸಂಶೋಧನಾ ಮಹಾಪ್ರಬಂಧವು ಸಿದ್ಧಪಡಿಸಿ ಇನ್ನೂ ಮುಂಚಿನ ದಲಿತ ಕವಿಗಳು ಇದ್ದರೂ ಇರಬಹುದು ಎಂಬ ಆಶಯ ನೀಡಿದ್ದರಿಂದ ನಾವು ಇನ್ನು ಹಿಂದಕ್ಕೆ ಹೋಗುವ ಅವಶ್ಯಕತೆ ಇದೆ. ಮತ್ತು ಸಂಶೋಧನೆಗಳು ಕೂಡಾ ಜರುಗುತ್ತಲಿವೆ.

"೧೯೭೩ರ ಸಂದರ್ಭದಲ್ಲಿ ಬಿ.ಬಸವಲಿಂಗಪ್ಪನವರು ಕರ್ನಾಟಕದ ಮಟ್ಟಿಗೆ ಡಾ.ಬಾಬಾ ಸಾಹೇಬ ಅಂಬೇಡ್ಕರ್‌ರಂತೆ ವಿಚಾರಗಳ ಆಸ್ಪೋಟವನ್ನು ಶುರು ಮಾಡಿದ್ದರು. ಅವರು ಮೈಸೂರಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಈ ವ್ಯವಸ್ಥೆಯನ್ನು ಮಾಡಿದವರು ಯಾರೋ ಕೆಲ ಜನ ಮಾತ್ರ ಇದನ್ನು ನಿರ್ಮಿಸಿದವರು ಬಡವರು ಅಲ್ಲವೇ ಅಲ್ಲ. ಬಡ ಜನರು ತಮ್ಮದಲ್ಲದ ಈ ಸಾಮಾಜಿಕ ವ್ಯವಸ್ಥೆಯನ್ನು ತಡೆಯಬೇಕು. ಕೆಲವೇ ಜನರಿಗೆ ಮಾತ್ರ ಲಾಭದಾಯಕ ಹಾಗೂ ಸ್ವಂತಕ್ಕೆ ಉಪಯೋಗವಾಗುವ ವ್ಯವಸ್ಥೆಯಿಂದ ಪ್ರಯೋಜನವೇನು? ಯಾರೋ ನಿರ್ಮಿಸಿದ ಚೌಕಟ್ಟಿನಲ್ಲಿ ಸಿಕ್ಕಿದ್ದೇವೆ. ಆ ಚೌಕಟ್ಟಿನಿಂದ ಪಾರಾಗುವುದೇ ಹೊಸ ಅಲೆ' ಎಂದು ದಿನಾಂಕ (೧೮.೧೧.೧೯೭೩ರಲ್ಲಿ ಮಾತನಾಡಿದ್ದು) ಇದೇ ಸಂದರ್ಭದಲ್ಲಿ ಬಸವಲಿಂಗಪ್ಪ ಅವರು ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದು ಕರೆದರು. ಆಗ ನಾಡಿನಾದ್ಯಂತ ಪ್ರತಿಭಟನೆಗಳು ಕಾಣಿಸಿಕೊಂಡಿದ್ದೂ ಇದೆ."[೭] "ಈ 'ಬೂಸಾ ಸಾಹಿತ್ಯ' ಪ್ರಕರಣದಿಂದ ಬಿ.ಬಸವಲಿಂಗಪ್ಪನವರು ತಮ್ಮ ಮಂತ್ರಿ ಪದವಿಯನ್ನು ಕಳೆದುಕೊಳ್ಳಬೇಕಾಯಿತು. ಇದನ್ನು ದಲಿತೇತರರು ಹೆಚ್ಚಿನ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದರು. ಈ ಅವಮಾನದಿಂದ ರೊಚ್ಚಿಗೆದ್ದ ಅನೇಕ ದಲಿತರು ಕರ್ನಾಟಕದಾದ್ಯಂತ ಒಂದು ದೊಡ್ಡದಾದ ಆಂದೋಲನಕ್ಕೆ ಸಿದ್ಧರಾದದ್ದು ಈ ಅವಧಿಯಲ್ಲಿಯೇ, ದಲಿತ ಸಾಹಿತ್ಯೋದಯಕ್ಕೆ ಮೊದಲಾಯಿತು ಎಂದು ಹೇಳಬಹುದು. ಹೀಗಾಗಿ ಕನ್ನಡ ದಲಿತ ಸಾಹಿತ್ಯದ ಮೇಲೆ ನೇರವಾಗಿ ಮಹಾನ್ ಮಾನವತಾವಾದಿಯಾದ ಬಾಬಾ ಸಾಹೇಬ ಅಂಬೇಡ್ಕರ್‌ರವರ ಚಿಂತನೆಗಳ ಪ್ರಭಾವವಾಗಿರುವುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ."[೮] ಈ ಸಂದರ್ಭದಲ್ಲಿಯೇ ದಲಿತ–ಬಂಡಾಯ ಸಾಹಿತ್ಯ ಉಗಮಗೊಂಡಿತು.

"ಇದೇ ಕಾವಿನಲ್ಲಿಯೇ ದಲಿತ ಸಾಹಿತ್ಯವನ್ನು ನಾವು ಮೊದಲು ಗುರುತಿಸುವುದು ದೇವನೂರ ಮಹಾದೇವನವರು ಬರೆದ ಏಳು ಕಥೆಗಳ 'ದ್ಯಾವನೂರು' ಸಂಕಲನದಿಂದಾಗಿ ಅದು ೧೯೭೩ರಲ್ಲಿ ಪ್ರಕಟವಾಯಿತು. ಆವರೆಗೂ ಬೇರುಬಿಟ್ಟಿದ್ದ ಸಾಹಿತ್ಯದ ಸಿದ್ಧ ಭಾಷೆ, ನುಡಿಗಟ್ಟು, ವಸ್ತು, ಅನುಭವಗಳನ್ನು ಭಂಜಕಗೊಳಿಸಿತು. ದಲಿತ ಬರಹಗಾರರು ಪ್ರತಿಭಟನಯ ಮೂಲಕ ತಮ್ಮ ಎಚ್ಚರವನ್ನು ಸ್ವಲ್ಪ ರೊಚ್ಚಿನಿಂದಲೇ ಹೇಳಬಯಸಿದರು. ಅಲ್ಲದೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಹಾಗೂ ರಾಜಕೀಯ ಸಂಘಟನೆಗಳ ಅನಿವಾರ್ಯತೆಯನ್ನು ಮನಗಂಡು ಕರ್ನಾಟಕ ದಲಿತ ಸಂಘರ್ಷ ಸಮಿತಿ ರೂಪುಗೊಂಡಿತು. ಮೈಸೂರು ವಲಯದಲ್ಲಿ ದೇವನೂರು ಮಹಾದೇವ, ಗೋವಿಂದಯ್ಯ, ಇಂಧೂಧರ ಹೊನ್ನಾಪೂರ, ಶಿವಾಜಿ ಗಣೇಶನ್, ರಾಮದೇವ ರಾಕೆ, ದೇವನೂರು ಶಿವಮಲ್ಲು ಅವರುಗಳು ಆರಂಭಿಸಿದ 'ಪಂಚಮ' ಎಂಬ ಪತ್ರಿಕೆ ದಲಿತ ಸಾಹಿತ್ಯದ ಹೊಸ ಆಲೋಚನೆ, ಅಭಿವ್ಯಕ್ತಿಗೆ ವೇದಿಕೆ ರೂಪಿಸಿಕೊಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿತು. ಈ ಪತ್ರಿಕೆಯೂ ನಾಡಿನ ತುಂಬಾ ಹೊಸ ಬರಹಗಾರರನ್ನು ಹುಟ್ಟು ಹಾಕಿತು. ದಲಿತರು ಬರೆದ ವಿಚಾರ, ವಿಮರ್ಶೆ, ಕಥೆ, ಕಾದಂಬರಿ, ಕಾವ್ಯಗಳು ಹೃದಯ ಕಲುಕಬಲ್ಲ ಅಂಶಗಳು ಜೀವಂತಿಕೆಯನ್ನು ಪಡೆದುಕೊಂಡವು. ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಬರತೆ ಎದ್ದು ಕಾಣುತ್ತದೆ. ಕಲೆಗಾರಿಕೆಯೇ ಸಾಹಿತ್ಯವಲ್ಲ, ಬದುಕು ಸತ್ಯ ಎಂಬ ನಿಲುವಿನಲ್ಲಿರುವ ಸಿದ್ಧಲಿಂಗಯ್ಯನವರ ಹೊಲೆಮಾದಿಗರ ಹಾಡು, ೧೯೭೫ರಲ್ಲಿ ಪ್ರಕಟಗೊಂಡಿತು. ಅಲ್ಲಿಂದ ಮುಂದೆ ಕಥೆ, ಕಾವ್ಯ, ಕಾದಂಬರಿ, ನಾಟಕ ಕ್ಷೇತ್ರದಲ್ಲಿ ಅತಿ ಹೆಚ್ಚು ಕೃಷಿ ನಡೆಯಿತು."[೯] ಹೆಚ್ಚು ಪ್ರಚಾರಗೊಳಿಸಿದ್ದು ಮತ್ತು ಜನಸಾಮಾನ್ಯರ ಗುಡಿಸಿಲಿನ ತನಕ

ಮುಟ್ಟಿದ್ದು ಸಿದ್ದಲಿಂಗಯ್ಯನವರ ಹೊಲೆ ಮಾದಿಗರ ಹಾಡುಗಳು.

“ಇಕ್ರಲಾ, ವದೀರ್ಲಾ
ಈ ನನ್ನ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಒಣಿಗೊಂದೊಂದ್ ತರ ಗುಡಿ ಕಟ್ಸವ್ರೆ
ಎಲ್ಲಾರೂ ದೇವ್ರ ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ ಮನೆ ಯಾವುದ್ಕೂ ಸೇರ್ಸಲ್ವಲ್ರೋ
ನಮ್ಮ ಹೇಲ್ ತಿನ್ನೋ ನಾಯ್ನ ಕ್ವಾಣಿ ವಳೀಕ್ ಬುಟ್ಕತ್ತಾರೆ.
ನಮ್ಯಾಲೆ ಮೀಟಿಂಗ್ ಮಾಡ್ತಾರೆ, ಕಾನೂನು ಮಾಡ್ತಾರೆ
ನಮ್ಮಯೇಸ್ರೇಳಿ ಹಾರ ಹಾಕ್ತಾರೆ ಹಾಕ್ಕುಸ್ಕಂತ್ತಾರೆ.
ಈ ನನ್ನ ಮಕ್ಳೂ ಕಳ್ಳಾಟ ಆಡ್ತಾ ಆವ್ರೆ ಅದಕ್ಕೇನೆ
ಇಕ್ರಲಾ ವದೀರ್ಲಾ ಈ ಸೂಳೆಮಕ್ಳ ಮೂಳೆ ಮೂರೀರ್ಲಾ”[೧೦]

ಎಂದು ಆಕ್ರೋಶ ಭರಿತವಾಗಿ ಗುಡುಗಿದ್ದಾರೆ. ಮುಂದೆ ಬಾಬಾ ಸಾಹೇಬರ ಕುರಿತಾಗಿ

‘ನಾಡ ನಡವಿನಿಂದ ಸಿಡಿದ ನೋವಿನ ಕೂಗೆ
ಆಕಾಶದ ಅಗಲಕ್ಕೂ ನಿಂತ ಆಲವೇ’. ಎಂದು ಮಹಾ ಕವನ ಬರೆದರು.

“ಹಸಿವಿನಿಂದ ಸತ್ತೋರು ನೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು”[೧೧]

ಎಂದು ಸಿದ್ದಲಿಂಗಯ್ಯನವರು ‘ನನ್ನ ಜನಗಳು’ ಎಂಬ ಕವಿತೆಯಲ್ಲಿ ವಾಸ್ತವತೆಯ ಅರಿವಿನ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಮುಂದೆ–

“ದೊಡ್ಡ ಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲು ಕಯ್ಯಿ
ಕಂಬ ಅವರ ಹಟ್ಟಿಗೆ”[೧೨]

‘ಬೆಲ್ಜಿಯ ಹಾಡು’ಗಳಲ್ಲಿ ಸಿದ್ದಲಿಂಗಯ್ಯನವರು ಮತ್ತೆ ಗುಡುಗಿದ್ದಾರೆ.

“ಯಾರಿಗೆ ಬಂತು ಎಲ್ಲಿಗೆ ಬಂತು
ನಲ್ವತ್ತೇಳರ ಸ್ವಾತಂತ್ರ್ಯ
ಟಾಟಾಬಿರ್ಲಾ ಜೇಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ಕೋಟ್ಯಾಧೀಶರ ಕೋಣೆಗೆ ಬಂತು
ನಲ್ವತ್ತೇಳರ ಸ್ವಾತಂತ್ರ್ಯ”[೧೩] (ನಲ್ವತ್ತೇಳರ ಸ್ವಾತಂತ್ರ್ಯ)

ಎಂಬಲ್ಲಿ ಸ್ವಾತಂತ್ರ್ಯಕ್ಕೆ ದಿಕ್ಕಾರ ಹಾಕುತ ಸಿದ್ದಲಿಂಗಯ್ಯನವರು ತಮ್ಮ ಕವನ ಜನರ ಮುಂದಿಟ್ಟಿದ್ದಾರೆ.

ಮುಂದೆ ಮ.ನ.ಜವರಯ್ಯನವರು
“ಸೋತಯೋನಿ ಕರ್ಣನಿಗೆ
ಕುಂಭಯೋನಿ ದ್ರೋಣನಿಗೆ
ಅಂತರ ಎಷ್ಟು?
ಅಂತರವಿಷ್ಟೆ
ಒಂದು ಮಡಿಕೆ, ಇನ್ನೊಂದು ಕುಡಿಕೆ”[೧೪]

ಎಂದು ಮನಜರವರು ತಮ್ಮ ವ್ಯಂಗ್ಯ ಧ್ವನಿ ಹೊರಹಾಕಿದ್ದಾರೆ. ಮಂಗ್ಳೂರು ನಾಗರಾಜ್‌ಯ್ಯನವರು ‘ದಾಖಲೆ’ ಎಂಬ ಕವನ ಸಂಕಲದಲ್ಲಿ

“ಕಿವುಡವ್ವ ಮರದವ್ವ ಕಿವಿಕೇಳದವ್ವ
ಕುರುಡವ್ವ ಮರದವ್ವ ಕಣ್ ಕಾಣದವ್ವ
ವಾರದ ನೆರಳಲ್ಲಿ ಹುಡುಕುತ್ತಾಳೆ ಮಗಳು
ತನ್ನವ್ವ ಅಪ್ಪರನ್ನ ಮತ್ತು
ಕಳೆದು ಹೋದ ಚರಿತ್ರೆಯನ್ನ”[೧೫]

ಎಂದು ಸಮಾಜಿಕ ವ್ಯವಸ್ಥೆಯನ್ನು ಜಾಲಾಡಿ ಬಿಡುತ್ತಾರೆ. ಮುಂದೆ ಮುನಿವೆಂಕಟಪ್ಪನವರು ಸಮಾನತೆಯ ಕನಸ್ಸನ್ನು ಹೀಗೆ ಕಾಣುತ್ತಾರೆ.

“ಸಕಲರಿಗೆ ಸಮಾನತೆಯ ಕನಸು
ಮಾನವೀಯತೆಯ ಬಯಸುವುದು ಕನಸು
ಕೊಲೆಯ ಕ್ರೌರ್ಯವ ಮೀರಿ ಬಾಳಬೆಳಕನು ಚೆಲ್ಲವುದು ನನ್ನ ಕನಸು
ಹಸಿದವರಿಗೆ ಅನ್ನ ನನ್ನ ಕನಸು
ಎಲ್ಲರಿಗಾಗಿ ಎಲ್ಲ ಸುಖ ದುಃಖ ಸಮಹಂಚಿಕೆ ನನ್ನ ಕನಸು”[೧೬]

ಎಂದು ಮುನಿವೆಂಕಟಪ್ಪನವರು ೧೯೮೦ರ ದಶಕದಲ್ಲಿ ‘ಕೆಂಡದ ನಡುವೆ’ ಎಂಬ ಕವನ ಸಂಕಲನದಲ್ಲಿ ಸರಕಾರವನ್ನು ಟೀಕಿಸಲಾಗಿದೆ.

“ನಿನ್ನೆ ದಿನ ನನ್ನ ಜನ
ಬೆಟ್ಟದಂತೆ ಬಂದರೋ
ಕಪ್ಪು ಮುಖ ಬಿಳಿಗಡ್ಡ ಉರಿಯುತ್ತಿರುವ ಕಣ್ಣುಗಳು” ಎನ್ನುತ
‘ದಲಿತರು ಬರುವರು ದಾರಿಬಿಡಿ
ದಲಿತರ ಕೈಯಲ್ಲಿ ರಾಜ್ಯಕೊಡಿ’ ಎಂದು ತಮ್ಮ ಹಕ್ಕನ್ನು ಇಲ್ಲಿ ಪ್ರಶ್ನಿಸಿದ್ದಾರೆ.

“ದೇವನೂರ ಮಹಾದೇವರ ಒಡಲಾಳ, ಕುಸಮಬಾಲೆ, ಕಾದಂಬರಿಗಳು ಸಿದ್ದಲಿಂಗಯ್ಯನವರ ಸಾವಿರಾರು ನದಿಗಳು (೧೯೭೯), ಕಪ್ಪು ಕಾಡಿನ ಹಾಡು (೧೯೮೩), ಪಂಚಮ ನೆಲಸಮ, ಏಕಲವ್ಯ ನಾಟಕಗಳು, ಅರವಿಂದ ಮಾಲಗತ್ತಿಯವರ ಮೂಕನಿಗೆ ಬಾಯಿ ಬಂದಾಗ (೧೯೮೧), ಕಪ್ಪು ಕಾವ್ಯ (೧೯೮೫), ಕಾರ್ಯ ಕಾದಂಬರಿ (೧೯೮೮), ಗೌರ್ಮೆಂಟ್ ಬ್ರಾಹ್ಮಣ (ಆತ್ಮಕಥೆ ೧೯೯೪), ಮುಳ್ಳೂರು ನಾಗರಾಜರವರ ಮರಣಮಂಡಲ ಮಧ್ಯದೊಳಗೆ (೧೯೮೬), ಮ.ನ.ಜವರಯ್ಯನವರ ಕೇಳು ಜಗಮಾದಿಗ ಹೊಲೆಯ (೧೯೮೧) ಅತ್ತೆ ಸೊಸೆ ಆತ್ಮ ಕಥೆ (೧೯೮೭), ಮಾಗಿ ಕಾದಂಬರಿ, ಚೆನ್ನಣ್ಣ ವಾಲೀಕಾರರ ದಲಿತ ಪ್ಯಾಂಥರ್ಸ್ ಪದ್ಯಗಳು, ಕರಿತೆಲಿ ಮಾನವನ ಜೀಪದಗಳು, ಡಪ್ಪಿನಾಟಗಳು, ವ್ಯೂಮಾ ಮ್ಯಮಾ (ಮಹಾಕಾವ್ಯ), ಮೊಗಳ್ಳಿ ಗಣೇಶರವರ ಬುಗುರಿ, ಸೋಮಣ್ಣ ಹೊಂಗಳ್ಳಿಯವರ ತಮಟೆ (೧೯೯೪), ಕತ್ತಲು ಹೀಗೆ ಮುಂದುವರೆದು, ದಿ. ದೇವಯ್ಯ ಹರವೆ, ಎಲ್. ಹನುಮಂತಯ್ಯ, ಬೊಳಬಂಡೆಪ್ಪ, ಲಕ್ಷ್ಮಣ”[೧೭] ಮುಂತಾದವರಲ್ಲದೆ,
“ಮುನಿವೆಂಕಟಪ್ಪ, ಕೆ.ಬಿ.ಸಿದ್ದಯ್ಯ, ದಾಸುರ ಕೂಸಣ್ಣ, ಹಂಪಣ್ಣ, ಸತ್ಯಾನಂದ ಪಾತ್ರೋಟ, ಬಿ.ಟಿ.ಲಲಿತಾ ನಾಯಕ, ಗೋವಿಂದರಾಜು, ಸಕಲವಾರ ಕಾವೇರಪ್ಪ, ಎಲ್. ಹನುಮಂತಯ್ಯ, ಹೂಸೂರು

ಮುನಿಶ್ಯಾಣಪ್ಪ, ಲೋಕೇಶ ಎಂ, ಮೋಹನ ನಾಗಮ್ಮನವರು, ಅನುಸೂಯಾ ಕಾಂಬಳೆ, ತೇಜಸ್ವಿ ಕಟ್ಟಿಮನಿ, ಮೋಹನ ಕುರಡಗಿ, ದೊಡ್ಡ ಬಸವ, ಸುಕನ್ಯಾ ಮಾರುತಿ, ಎಚ್.ಎಸ್. ಅನುಪಮಾ, ಎಚ್.ಎಲ್.ಪುಷ್ಪಾ, ದು. ಸರಸ್ವತಿ, ಸುಬ್ಬು ಹೊಲೆಯೂರ್, ಡಾ. ಹಣಮಂತರಾವ ದೊಡ್ಡಮನಿ, ಮೂಡ್ನಕೂಡ ಚಿನ್ನಾಸ್ವಾಮಿ, ಡಾ.ಎಚ್.ಟಿ.ಪೋತೆ, ಅರ್ಜುನ ಗೊಳಸಂಗಿ, ಮಲ್ಲಿಕಾರ್ಜುನ ಆಮ್ಣೆ, ವೀರ ಹನುಮಾನ, ಆಂಜನೆಯ ಜಾಲಿಬೆಂಚಿ, ಕೆ. ರಾಮಯ್ಯ, ಎಸ್.ಪಿ. ಸುಳ್ಳದ್, ಸಿ.ಬಸಲಿಂಗಯ್ಯ, ಸೂರ್ಯಕಾಂತ ಸುಜ್ಯಾತ್, ರಮೇಶ್ ಗೊಬ್ಬುರು, ಅಪ್ಪುಗೇರೆ ಸೋಮಶೇಖರ, ಟಿ.ಎಂ. ಭಾಸ್ಕರ್”[೧೮] ಹೀಗೆ ಮುಂತಾದ ದಲಿತ ಸಾಹಿತಿಗಳ ಪಟ್ಟಿ ಬೆಳಯುತ್ತ ಹೋಗುತ್ತದೆ. ಒಟ್ಟಾರೆಯಾಗಿ ದಲಿತ ಸಾಹಿತ್ಯವು ಒಂದು ತಾತ್ವಿಕ ಚಿಂತನೆಯ ನೆಲೆಯಲ್ಲಿ ಇಂದು ವಿಶಾಲವಾಗಿ ಬೆಳೆದು ನಿಂತಿದೆ.

**ಅಡಿಟಿಪ್ಪಣಿಗಳು**

1. ‘ಹೈದ್ರಾಬಾದ ಕರ್ನಾಟಕ ದಲಿತ ಚಳವಳಿ ಮತ್ತು ಸಾಹಿತ್ಯ’ (ಅಪ್ರಕಟಿತ ಸಂಶೋಧನಾ ಪ್ರಬಂಧ) ಶ್ರೀ ಜೈಶೇನ್ ಪ್ರಸಾದ ರೇವಣಪ್ಪಾ, ಪು.ಸಂ. ೦೪
2. ‘ಕನ್ನಡ ದಲಿತ ಸಾಹಿತ್ಯದ ನೆಲೆ’ – ಡಾ.ಜಿ.ಆರ್. ತಿಪ್ಪೇರುದ್ರಸ್ವಾಮಿ, ಪು.ಸಂ. ೩
3. ‘ಹೈದ್ರಾಬಾದ ಕರ್ನಾಟಕ ದಲಿತ ಚಳವಳಿ ಮತ್ತು ಸಾಹಿತ್ಯ’ (ಅಪ್ರಕಟಿತ ಸಂಶೋಧನಾ ಪ್ರಬಂಧ) ಶ್ರೀ ಜೈಶೇನ್ ಪ್ರಸಾದ ರೇವಣಪ್ಪಾ – ಪು.ಸಂ. ೦೯–೧೦
4. ಅದೇ, ಪು.ಸಂ. ೫೫
5. ದಲಿತ ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವುಗಳು – ಬಂಡೆಪ್ಪಾ ಸುಭಾಷ (ಅಪ್ರಕಟಿತ ಸಂಶೋಧನಾ ಪ್ರಬಂಧ, ಗುವಿಗು, ೨೦೧೩), ಪು.ಸಂ. ೧೦
6. ಕನ್ನಡ ಸಾಹಿತ್ಯ: ಮೊದಲ ತಲೆಮಾರಿನ ದಲಿತ ಲೇಖಕರು– ಸುನೀಲಕುಮಾರ ಪಿ.ಕಾಂಬಳೆ, (ಅಪ್ರಕಟಿತ ಸಂಶೋಧನಾ ಪ್ರಬಂಧ, ಗುವಿಗು, ೨೦೧೩), ಪು.ಸಂ. ೧೬
7. ದಲಿತ–ಬಂಡಾಯ ಕಾವ್ಯ ಮತ್ತು ವಿಚಾರವಾದಗಳು – ಡಾ. ಪ್ರಹ್ಲಾದ ಅಗಸನಕಟ್ಟೆ, ಪು.ಸಂ. ೪೩–೪೪
8. ದಲಿತ ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವುಗಳು – ಬಂಡೆಪ್ಪಾ ಸುಭಾಷ (ಅಪ್ರಕಟಿತ ಸಂಶೋಧನಾ ಪ್ರಬಂಧ, ಗುವಿಗು, ೨೦೧೩), ಪು.ಸಂ. ೫೬
9. ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ, ಪು.ಸಂ. ೮೦
10. ದಲಿತ–ಬಂಡಾಯ ಕಾವ್ಯ ಮತ್ತು ವಿಚಾರವಾದಗಳು – ಡಾ. ಪ್ರಹ್ಲಾದ ಅಗಸನಕಟ್ಟೆ, ಪು.ಸಂ. ೧೫೧
11. ಅದೇ ಪು.ಸಂ. ೧೫೨
12. ಅದೇ ಪು.ಸಂ. ೧೫೩
13. ಅದೇ ಪು.ಸಂ. ೧೫೩
14. ಅದೇ ಪು.ಸಂ. ೧೫೪
15. ಅದೇ ಪು.ಸಂ. ೧೫೪
16. ಅದೇ ಪು.ಸಂ. ೧೫೫
17. ಕನ್ನಡ ಸಾಹಿತ್ಯಕೋಶ – ರಾಜಪ್ಪ ದಳವಾಯಿ ಪು.ಸಂ. ೮೧
18. ದಲಿತ ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವುಗಳು ಬಂಡೆಪ್ಪಾ ಸುಭಾಷ(ಅಪ್ರಕಟಿತ ಸಂಶೋಧನಾ ಪ್ರಬಂಧ, ಗುವಿಗು, ೨೦೧೩), ಪು.ಸಂ. ೯೩–೯೪